ಸಂಖ್ಯೆ:ವಾಣಿಜ್ಯ/ಗ್ಯಾಸ್ ಕಟ್ಟಿಂಗ್/ಟೆಂಡರ್ ಪ್ರಕಟಣೆ/2016

ದಿನಾಂಕ: 18.04.2016.

## ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಚನ್ನಸಂದ್ರ ಸ್ಟಾಕ್ ಯಾರ್ಡ್‌ನಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಚ್ಚಾ ಸಾಮಗ್ರಿಗಳ ಗ್ಯಾಸ್ ಕಟಿಂಗ್ ಕಾರ್ಯಕ್ಕಾಗಿ ಗ್ಯಾಸ್ ಕಟಿಂಗ್ ಗುತ್ತಿಗೆದಾರರಿಂದ ಮೊಹರಾದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅವಧಿ ಎರಡು ವರ್ಷಗಳಿಗೆ ಸೀಮಿತವಾಗಿರುತ್ತದೆ.

ಆಸಕ್ತ ಗುತ್ತಿಗೆದಾರರು ರೂ.1000/- (ರೂಪಾಯಿ ಒಂದು ಸಾವಿರ ಮಾತ್ರ) ಮುಂಗಡ ಠೇವಣಿಯನ್ನು ಮೆ:"ಕೆ.ಎಸ್.ಎಸ್.ಐ.ಡಿ.ಸಿ"ಲಿ, ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ ಸಂಗಡ ಟೆಂಡರ್ ಸಲ್ಲಿಸತಕ್ಕದ್ದು. ಕಟಿಂಗ್ ದರವನ್ನು ನಿಗದಿತ ನಮೂನೆಯಲ್ಲಿ ಪ್ರತಿ ಟನ್‌ಗೆ ನಮೂದಿಸಿ ಮೊಹರಾದ ಲಕೋಟೆಯನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ) ಮೆ:"ಕೆ.ಎಸ್.ಎಸ್.ಐ.ಡಿ.ಸಿ"ಲಿ, ಚನ್ನಸಂದ್ರ, ಬೆಂಗಳೂರು ರವರಿಗೆ ದಿನಾಂಕ 20.05.2016 ರೊಳಗಾಗಿ ಸಲ್ಲಿಸಬೇಕು. ಯಾವುದೇ ಕಾರಣಗಳನ್ನು ನೀಡದೆ, ಟೆಂಡರ್ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಎಸ್ಐಡಿಸಿ.ಲಿ., ಬೆಂಗಳೂರು ರವರು ಹೊಂದಿರುತ್ತಾರೆ. ಕಚ್ಚಾ ಸಾಮಗ್ರಿಗಳ ವಿವರ, ಟೆಂಡರ್ ವಿವರಗಳು, ನಮೂನೆಗಳನ್ನು ನಿಗಮದ ವೆಬ್‌ಸೈಟ್ www.kssidc.kar.nic.in ನಿಂದ Down load ಮಾಡಿಕೊಳ್ಳಬಹುದು ಹಾಗೂ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ), ಕೆಎಸ್ಎಸ್ಐಡಿಸಿ.ಲಿ., ಚನ್ನಸಂದ್ರ ಬೆಂಗಳೂರು ರವರನ್ನು ಮೊಬೈಲ್ ಸಂಖ್ಯೆ 8884415877 / ಕಛೇರಿ ದೂರವಾಣಿ ಸಂಖ್ಯೆ 08025650891 ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ) i/c

ಅನುಬಂಧ-1

**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಚನ್ನಸಂದ್ರ ಉಗ್ರಾಣ ರಾಮಮೂರ್ತಿನಗರ, ಬೆಂಗಳೂರು:560016.**

**ಉಲ್ಲೇಖ: ಟೆಂಡರ್ ಪ್ರಕಟಣೆ ಸಂಖ್ಯೆ:ಕರಾಸಕೈಅನಿನಿ:ಚನ್ನಸಂದ್ರ ಉಗ್ರಾಣ:ಕ/ಉ ಸರಕು:ಕಟಿಂಗ್:2016.**

**ದಿನಾಂಕ :**

**"ಗ್ಯಾಸ್ ಕಟಿಂಗ್ ಗುತ್ತಿಗೆಗೆ ಸಂಬಂಧಿಸಿದಂತೆ ಭರ್ತಿ ಮಾಡಿ ಸಲ್ಲಿಸಬೇಕಾದ ಟೆಂಡರ್ ನಮೂನೆ."**

| ಕ್ರ.ಸಂ. | ಸರಕು ವಿವರಣೆ | | |
|---|---|---|---|
| ಅ) | ಕಬ್ಬಿಣ ಮತ್ತು ಉಕ್ಕು ಕಚ್ಚಾ ಸಾಮಗ್ರಿಗಳಿಗೆ | ದರಗಳು ಪ್ರತಿ ಟನ್ ಗೆ | |
| | | Single Cutting Rate lenth wise | |
| | | In figures | In words |
| 1 | MS Angles 50x50x6mm 100x100x10mm ವರೆಗೆ ಹಾಗೂ ಮೇಲ್ಪಟ್ಟು | | |
| 2 | C 75x40mm ರಿಂದ 150x75 ವರೆಗೆ ಹಾಗೂ ಮೇಲ್ಪಟ್ಟು | | |
| 3 | RS Joists 125x70mm ರಿಂದ 150x75 mm ರಿಂದ 600x210 mm ರವರೆಗೆ | | |
| 4 a) b) | MS Rounds 16mm ರಿಂದ 40mm 42mm ನಿಂದ 80 mm ವರೆಗೆ | | |
| 5 a.) | MS plates 5mm ನಿಂದ 20mm ವರೆಗೆ | | |
| b) | 2.5mtr width 12.50mtr length ವರೆಗೆ | | |
| c) | 21mm to 32mm plate. | | |
| d) | 40 to 63mm plate. | | |
| e) | 63mm &above plate | | |
| ಆ | ಬಿಲೆಟ್ಸ್ ಗಳಿಗೆ | | |
| | | Rate For Single cutting Length wise | |
| | | In Figures | In Words |
| 1. | .Billets/MS Square<br>1. 75x75mm<br>2 .90x90mm<br>3 100x110mm<br>4. 110x110mm<br>5.. 120x120mm | | |

ಗೆ,

ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ)

ಕರಾಸಕೈಅನಿನಿ,ಚನ್ನಸಂದ್ರ ಉಗ್ರಾಣ

ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ)
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ
ಅಭಿವೃದ್ಧಿ ನಿಗಮ ನಿಯಮಿತ
ಚನ್ನಸಂದ್ರ, ಬೆಂಗಳೂರು-560 016

ಟೆಂಡರ್‌ದಾರರ ಸಹಿ

ಹಾಗೂ ಮೊಹರು.

ಬೆಂಗಳೂರು.

ಸಂಖ್ಯೆ:ಕರಾಸಕ್ಕೆಅನಿನಿ:ಸಂದ್ರ ಉ:ಕ/ಉ ಸರಕು:ಕಟ್ಟಿಗ್:2016

ದಿನಾಂಕ: 01.04.2016

# ಟೆಂಡರ್ ವಿವರ ಹಾಗೂ ಷರತ್ತುಗಳು

ವಿಷಯ: ಚನ್ನಸಂದ್ರ ಉಗ್ರಾಣದಲ್ಲಿ 2016-17 ಮತ್ತು 2017-18 ನೇ ಸಾಲುಗಳಲ್ಲಿ ಕಬ್ಬಿಣ ಮತ್ತು ಸರಕುಗಳನ್ನು ಗ್ಯಾಸ್ ಕಟ್ಟಿಂಗ್ ಮೂಲಕ ತುಂಡರಿಸುವ ಗುತ್ತಿಗೆಯನ್ನು ವಹಿಸುವ ಬಗ್ಗೆ.

<<<<>>>

ಚನ್ನಸಂದ್ರ ಉಗ್ರಾಣದಲ್ಲಿ 2016-17 ಮತ್ತು 2017-18 ರವರೆಗಿನ ಎರಡು ವರ್ಷಗಳ ಅವಧಿಯವರೆಗೆ ಲಗತ್ತಿಸಿರುವ ಅನುಬಂಧ-1 ನಮೂನೆಯಲ್ಲಿ ನಮೂದಿಸಿರುವ ಕಬ್ಬಿಣ ಮತ್ತು ಉಕ್ಕು ಸರಕುಗಳನ್ನು ಸಣ್ಣ ಉದ್ದಿಮೆದಾರರ ಬೇಡಿಕೆಗಳಿಗೆ ಗ್ಯಾಸ್ ಮೂಲಕ ತುಂಡರಿಸಲು ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಸಲ್ಲಿಸುವವರು ಈ ಕೆಳಗಿನ ಷರತ್ತುಗಳಿಗೆ ಬದ್ಧರಾಗಿರಬೇಕು.

**ಷರತ್ತುಗಳು:**

1. ಲಗತ್ತಿಸಿರುವ ನಮೂನೆಯ ಕಾಲಂ–3 ಮತ್ತು 4ಗಳಲ್ಲಿ ದರಗಳನ್ನು ಭರ್ತಿಮಾಡಿದ ಟೆಂಡರ್‌ನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು(ಉಗ್ರಾಣ) ಚನ್ನಸಂದ್ರ ಉಗ್ರಾಣ,ಬೆಂಗಳೂರು 560016 ಇವರ ವಿಳಾಸಕ್ಕೆ ಮೊಹರು ಮಾಡಿದ ಲಕೋಟೆಯಲ್ಲಿ ರೂ.1000/-(ರೂಪಾಯಿ ಒಂದು ಸಾವಿರ ಮಾತ್ರ) ಭದ್ರತಾ ಠೇವಣಿಯನ್ನು "ಕೆ.ಎಸ್.ಎಸ್.ಐ.ಡಿ.ಸಿ" ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ ಲಗತ್ತಿಸಿ, ದಿನಾಂಕ: 20.05.2016. ರಂದು ಸಂಜೆ 5.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ದರಗಳನ್ನು ಸಂಖ್ಯೆ ಮತ್ತು ಅಕ್ಷರಗಳಲ್ಲಿ ನಮೂದಿಸತಕ್ಕದ್ದು. ಮುಂಗಡ ಠೇವಣಿಯನ್ನು ಲಗತ್ತಿಸದೆ ಸಲ್ಲಿಸುವ ಟೆಂಡರ್‌ಗಳನ್ನು ಪರಿಗಣಿಸುವುದಿಲ್ಲ.
2. ಲಕೋಟೆಯ ಮೇಲೆ "ಚನ್ನಸಂದ್ರ ಉಗ್ರಾಣದಲ್ಲಿ ಗ್ಯಾಸ್ ಕಟಿಂಗ್ ಕಾರ್ಯಕ್ಕೆ ಗುತ್ತಿಗೆ" ಎಂದು ನಮೂದಿಸಬೇಕು.
3. ದಿನಾಂಕ: 20.05.2016 ರ ಸಂಜೆ 5.00 ಗಂಟೆಯ ತರುವಾಯ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
4. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 21.05.2016 ರಂದು ಸಹಾಯಕ ಪ್ರಧಾನ ವ್ಯವಸ್ಥಾಪಕರು(ಉ) ಚನ್ನಸಂದ್ರ ಬೆಂಗಳೂರು16 ಇವರ ಕಛೇರಿಯಲ್ಲಿ ಮಧ್ಯಾಹ್ನ 4.30 ಗಂಟೆಗೆ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಸದರಿ ದಿನದಂದು

ಟೆಂಡರ್‌ಗಳನ್ನು ತೆರೆಯಲಾಗದಿದ್ದಲ್ಲಿ ಮುಂದಿನ ಸಾರ್ವಜನಿಕ ರಜೆ ಹೊರತುಪಡಿಸಿ, ಸರ್ಕಾರಿ ಕೆಲಸ ದಿನದಂದು ಸಂಜೆ 4.30 ಗಂಟೆಗೆ ಟೆಂಡರ್ ಲಕೋಟೆಗಳನ್ನು ತೆರೆಯಲಾಗುವುದು.

5. ಅಂಗೀಕರಿಸಲ್ಪಟ್ಟ ಗುತ್ತಿಗೆದಾರರು ಕಾರ್ಯಾದೇಶವನ್ನು ಪಡೆದ ಒಂದು ವಾರದ ಒಳಗೆ ಕರಾರು ಪತ್ರ ಸಲ್ಲಿಸಿ ಕೆಲಸವನ್ನು ಪ್ರಾರಂಭಿಸುವುದು. ಈ ಗುತ್ತಿಗೆ ಕಾರ್ಯದೇಶ ಪಡೆದ ದಿನಾಂಕದಿಂದ ಎರಡು ವರ್ಷಗಳ ಅವಧಿವರೆಗೆ ಇರುತ್ತದೆ.
6. ಗುತ್ತಿಗೆದಾರರು ಪ್ರಸ್ತುತ ಕೆಲಸದಲ್ಲಿ ಹೊಂದಿರುವ ಅನುಭವದ ದಾಖಲೆಯನ್ನು ಟೆಂಡರ್‌ನೊಂದಿಗೆ ಲಗತ್ತಿಸಬೇಕು.
7. ಅನುತ್ತೀರ್ಣ ಗುತ್ತಿಗೆದಾರರ ಮುಂಗಡ ಠೇವಣಿಯ ಡಿಮಾಂಡ್ ಡ್ರಾಫ್ಟ್‌ಗಳನ್ನು ದರಗಳ ಪಟ್ಟಿ ತೆರೆಯುವ ದಿನದಂದು ಹಿಂದಿರುಗಿಸಲಾಗುವುದು. ಉತ್ತೀರ್ಣರಾದ ಗುತ್ತಿಗೆದಾರರು ಕಾರ್ಯದೇಶ ಪಡೆದು ಗುತ್ತಿಗೆ ಕೆಲಸ ನಿರ್ವಹಿಸಲು ವಿಫಲರಾದಲ್ಲಿ ಸದರಿಯವರು ಪಾವತಿಸಿದ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಕಪ್ಪು ಪಟ್ಟಿಗೆ ಸೇರಿಸಲಾಗುವುದು. ಇಂತಹ ಸಂದರ್ಭದಲ್ಲಿ ಎರಡನೇ ಕಡಿಮೆ ದರ ಹಾಗೂ ಅನುಭವ ಹೊಂದಿರುವ ಗುತ್ತಿಗೆದಾರರಿಗೆ ಗುತ್ತಿಗೆಯನ್ನು ನೀಡಲಾಗುವುದು.
8. ಟೆಂಡರ್‌ನ್ನು ಒಪ್ಪಿಕೊಳ್ಳುವ ಇಲ್ಲವೆ ತಿರಸ್ಕರಿಸುವ ಅಥವಾ ಟೆಂಡರ್ ಪ್ರಕ್ರಿಯೆಯನ್ನು ಯಾವುದೇ ಕಾರಣ ನೀಡದೇ ರದ್ದುಪಡಿಸುವ ಅಧಿಕಾರ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.
9. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ) ಚನ್ನಸಂದ್ರ ಬೆಂಗಳೂರು-16 ಇವರನ್ನು ಕಛೇರಿ ದೂರವಾಣಿ ಸಂಖ್ಯೆ 25650891 ಅಥವಾ ಮೊಬೈಲ್ ಸಂಖ್ಯೆ: 8884415877 ಮೂಲಕ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.
10. ಒಂದಕ್ಕಿಂತ ಹೆಚ್ಚು ಕಟಿಂಗ್ ಕೆಲಸ ನಿರ್ವಹಿಸದ್ದಲ್ಲಿ ಸಿಂಗಲ್ ಕಟಿಂಗ್ ದರವನ್ನು ಲೆಕ್ಕಕ್ಕೆ ತೆಗೆದುಕೊಂಡು ದರ ಗುಣಿಸಿ ಪಾವತಿಸಲಾಗುವುದು.
11. ಷರತ್ತು ಬದ್ಧ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ)

ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ)
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ
ಅಭಿವೃದ್ಧಿ ನಿಗಮ ನಿಯಮಿತ
ಚನ್ನಸಂದ್ರ, ಬೆಂಗಳೂರು-560 016